ಕೆ.ಆರ್.ಡಿ.ಸಿ.ಎಲ್ ವತಿಯಿಂದ ನಿರ್ಮಿಸಿರುವ ಸೇತುವೆಗಳು

931 (901); ಶ್ರೀ ಕುಮಾರಸ್ವಾಮಿ ಎಚ್. ಕೆ. (ಸಕಲೇಶಪುರ)

(ಅ) ಇಲಾಖೆಯು ಕೆ.ಆರ್.ಡಿ.ಸಿ.ಎಲ್ ವತಿಯಿಂದ ಸಕಲೇಶಪುರ ತಾಲ್ಲೂಕಿಗೆ 2007–08ನೇ ಸಾಲಿನಲ್ಲಿ ಸುಮಾರು 20 ಸೇತುವೆಗಳು ಮಂಜೂರಾಗಿರುವುದು ನಿಜವೇ;

(ಆ) ಇವುಗಳಲ್ಲಿ 11 ಸೇತುವೆಗಳ ಕಾರ್ಯ ಪ್ರಗತಿಯಲ್ಲಿದ್ದು, ಇವುಗಳೂ ಕೂಡ ಅಪೂರ್ಣಗೊಂಡಿರುವುದು ನಿಜವೇ; ಇದಕ್ಕೆ ಕಾರಣಗಳೇನು; (ಪೂರ್ಣ ಮಾಹಿತಿ ನೀಡುವುದು)

(ಇ) ಮಂಜೂರಾಗಿರುವ ಎಲ್ಲಾ ಸೇತುವೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

ಡಾ. ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

(ಅ) ಇಲ್ಲ. 2007–08ನೇ ಸಾಲಿಗೆ 7 ಸೇತುವೆ ಕಾಮಗಾರಿಗಳು ಮಂಜೂರಾಗಿರುತ್ತವೆ. 2005–06ನೇ ಸಾಲಿನಲ್ಲಿ 2 ಸೇತುವೆ, 2006–07 ನೇ ಸಾಲಿನಲ್ಲಿ 11 ಸೇತುವೆ ಹಾಗೂ 2007–08ನೇ ಸಾಲಿನಲ್ಲಿ 7 ಸೇತುವೆ ಕಾಮಗಾರಿಗಳು (ಒಟ್ಟು 20 ಸೇತುವೆಗಳು) ಮಂಜೂರಾಗಿರುತ್ತವೆ.

(ಆ) ಇಲ್ಲ. ಕೆ.ಆರ್.ಡಿ.ಸಿ.ಎಲ್ ವತಿಯಿಂದ 9 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಉಳಿದ 11 ಕಾಮಗಾರಿಗಳನ್ನು ಅನುದಾನದ ಕೊರತೆಯ ಹಿನ್ನೆಲೆಯಲ್ಲಿ ಕೈಬಿಡಲಾಗಿದೆ. ಈ 9 ಕಾಮಗಾರಿಗಳ ಪೈಕಿ 7 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 2 ಸೇತುವೆ ಕಾಮಗಾರಿಗಳ ಸಣ್ಣ ಪುಟ್ಟ ಕೆಲಸಗಳು ಪ್ರಗತಿಯಲ್ಲಿದ್ದು, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

(ಇ) 9 ಸೇತುವೆಗಳ ಪೈಕಿ 7 ಸೇತುವೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿದ ಎರಡು ಸೇತುವೆಗಳ ಬಾಕಿ ಕೆಲಸಗಳಾದ, ಕೂಡು ರಸ್ತೆ ಜೆಲ್ಲಿ ಡಾಂಬರೀಕರಣ ಹಾಗೂ ರಕ್ಷಣಾತ್ಮಕ ಕೆಲಸಗಳನ್ನು ಮಳೆಗಾಲ ಮುಗಿದ ಕೂಡಲೆ ಪೂರ್ಣಗೊಳಿಸಲಾಗುವುದು.